ರತ್ನಾ ರಾಜಕುಮಾರ್, ಹಾಸನ

◆ ಹುಣ್ಣಿಮೆಯ ಚಂದ್ರ ನನ್ನನ್ನೇ ನೋಡುತ್ತಿದ್ದಾನಲ್ಲಾ...?



ಮುಖ ಒರೆಸಿಕೊಳ್ಳಿ. 'ನನ್ನಷ್ಟೇ ಕಲೆ ಇರುವ ಈಕೆ ಯಾರು?' ಎಂದು ನೋಡುತ್ತಿದ್ದಾನೆ.

ಟಿ.ಕೆ. ಶ್ರೀನಿಧಿ, ಬೆಂಗಳೂರು

◆ ತಮ್ಮ ಸೈಟಲ್ಲಿ ಒಂದಿಂಚೂ ಬಿಡದೆ ಮನೆ ಕಟ್ಟಿ ರಸ್ತೆಯಲ್ಲಿ ಬೇಲಿ ಹಾಕಿ ಗಿಡ ಬೆಳೆಸುವ 'ಹಸಿರುಪ್ರಿಯ'ರ ಬಗ್ಗೆ ಏನೆನ್ನುವಿರಿ?

'ಸೈಟಲ್ಲಿ ಮನೆಯಿರಲಿ, ಜಗವೆಲ್ಲ ಹಸಿರಿರಲಿ' ಎಂಬ ಸಣ್ಣ ಕಳ್ಳ ಬುದ್ಧಿ.

ರತ್ನಾ ಅಶೋಕ ಗೊರವರ, ಧಾರವಾಡ

◆ ಹೆಣ್ಣು ಅಬಲೆ. ಗಂಡು?

'ಅಬಲೆ, ನಿನ್ನದು ಎಂತಹ ಸುಂದರ ಬಲೆ' ಎನ್ನುತ್ತಾ ಬಲೆ ಹೆಣೆಯುವ ಬಲೆಗಾರ.

ಅನಂತಪದ್ಮನಾಭ ಎಚ್.ಎಂ. ಮೈಸೂರು

◆ ಭೈರಪ್ಪನವರು 'ಉತ್ತರಕಾಂಡ' ಬರೆದು ದೇವರ (ರಾಮನ) ಮೇಲೆ ಸೇಡು (ತಮ್ಮ ಸಂಕಷ್ಟ) ತೀರಿಸಿಕೊಂಡರೆ?




ನಿಮ್ಮ ಗ್ರಹಣದಲ್ಲಿ ಈ ಭಾವವೇ ನೆಲೆಯಾಗಿದ್ದರೆ ನಿರಾಕರಣವಿಲ್ಲ. ಓದುಗನನ್ನು ಚಿಂತನೆಗೆ ಹಚ್ಚಿದರೆ ಲೇಖಕ ಗೆದ್ದಂತೆ.

ರಾಜೀವ್ ಎನ್. ಮಾಗಲ್, ಸಕಲೇಶಪುರ

◆ ಶೇ. 95 ಪಡೆದ ಮಕ್ಕಳಿಗೆ ಮಾತ್ರ ಸೀಟ್ ನೀಡಿ ಶೇ. 100 ಫಲಿತಾಂಶ ಗಿಟ್ಟಿಸುವುದು ಯಶಸ್ಸಿನ ಗುಟ್ಟೆ?

ಒಂದು ವಿಧದಲ್ಲಿ ಹೌದು. ಅರ್ಹರೆಂದು ಕೊಟ್ಟಂತರಕ್ಕೆ ಕೊಂಡು ಟ್ರೋಫಿ ಸೋಲುವ ಆರ್‌ಸಿಬಿಗಿಂತ ಇದು ಉತ್ತಮವೇ!

ವೈದೇಹಿ, ಮೈಸೂರು

◆ ತನ್ನ ಉದ್ಯೋಗದ ಬಗ್ಗೆ ತಪ್ಪು ಮಾಹಿತಿ ಕೊಟ್ಟು ಲಗ್ನವಾಗುವ ಅಯೋಗ್ಯ ವರಮಹಾಶಯನಿಗೆ ನಿಮ್ಮ ಉಪದೇಶವೇನು?

ಕ್ಷಮಿಸಿ; ಪೀಡೆಗಳಿಗೆ ಮಾಡಬೇಕಾದ್ದು ಉಪದೇಶವಲ್ಲ, ಉಚ್ಚಾಟನೆ.

ವಿಜಯಕುಮಾರ್ ಎಚ್.ಕೆ., ರಾಯಚೂರು

◆ ಅನುಮಾನಕ್ಕೆ ಪ್ರಶ್ನೆ ಕೇಳಲಿಕ್ಕೂ, ಬಹುಮಾನಕ್ಕೆ ಪ್ರಶ್ನೆ ಕೇಳಲಿಕ್ಕೂ ಏನು ವ್ಯತ್ಯಾಸ?

ಅನುಮಾನಕ್ಕೆ ಕೇಳಿದ್ದಕ್ಕೆ ಪರಿಹಾರವೇ ಬಹುಮಾನ. ಬಹುಮಾನಕ್ಕೆಂದೇ ಕೇಳಿದ್ದಕ್ಕೆ ಪರಿಹಾರ ಅನುಮಾನ.

ಹೆಚ್.ವಿ. ಶ್ರೀಧರ್, ಬೆಂಗಳೂರು

◆ ಒಂದು ಟಿ.ವಿ. ವಾಹಿನಿ ಆರಂಭಿಸಬೇಕೆಂದಿದ್ದೇನೆ. 'ಬ್ಲಾಕ್‌ಮೇಲ್ ಟಿ.ವಿ.' ಎಂದು ಹೆಸರಿಡಬಹುದೆ?

ಏನು ಬೇಕಾದರೂ ಇಡಿ. ನೀವು ನಡೆಸುವ ಕಾರ್ಯಕ್ರಮಗಳಿಂದಲೇ ಅದರ (ದುರ್)ಗುಣ ಜನಕ್ಕೆ ತಿಳಿಯುತ್ತದೆ.

ಕೆ.ವಿ. ಗೋವಿಂದಾಚಾರಿ, ಮೈಸೂರು

◆ ಅಂದು ನಾವಿಬ್ಬರು ನಮಗಿಬ್ಬರು. ಈಗ ನಾವಿಬ್ಬರು ನಮಗೆ ಒಬ್ಬರು. ಮುಂದೆ?

ಊರಿಗೊಂದು ಮಗು; ಸರ್ಕ್ಯುಲೇಟಿಂಗ್ ಲೈಬ್ರರಿಯ ಪುಸ್ತಕದಂತೆ ಒಂದೊಂದು ದಿನ ಒಬ್ಬೊಬ್ಬರ ಬಳಿ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

◆ ಮನುಷ್ಯ ಎಷ್ಟು ಸ್ವಾರ್ಥಿ ಆಗಿರಬೇಕು?

ಕೊಳ್ಳೆ ಹೊಡೆಯದೆ, ಕೊಳ್ಳಿ ಇಡದೆ, ಕೊಳ್ಳುವಷ್ಟು.

ರತ್ನಜ, ಮೈಸೂರು

◆ ಈಗೀಗ ಸಂಸತ್‌ನಲ್ಲಿ ಕಣ್ಣು ಹೊಡೆಯುವ ರೋಗ ಹೆಚ್ಚಾಗುತ್ತಿದೆಯಲ್ಲ ರಾಮಣ್ಣ...?

ಹೌದು. ಮೆದುಳಲ್ಲಿ ಓಲ್ಟೇಜ್ ಡ್ರಾಪ್ ಆದಾಗ ಕಣ್ಣು ಟ್ಯೂಬ್‌ಲೈಟ್‌ನಂತೆ ಮಿಣುಕ್ ಮಿಣುಕ್ ಎನ್ನುವ ರೋಗವದು.

ಅಮರಯ್ಯಾ ಪತ್ರಿಮಠ, ಸುರಪುರ

◆ ಅನುಕ್ಷಣವೂ ನಮ್ಮ ಜೊತೆಯಿರುವ 'ಒಡನಾಡಿ' ಯಾರು?

ನಾಡಿ.

## ಬಹುಮಾನಿತ ಪ್ರಶ್ನೆ

ಡಾ. ವಿ. ಪುಗಳೇಂದಿ, ಬಳ್ಳಾರಿ

◆ ಡಿಗ್ರಿ ಪರೀಕ್ಷೆಯಲ್ಲಿ ರ್‍ಯಾಂಕ್ ಪಡೆದವರೂ ವಧು ಪರೀಕ್ಷೆಯಲ್ಲಿ ಫೇಲ್ ಆಗೋದು ಯಾಕೆ ಗುರು?

ಅವಳು ಬರೀ ಔಟ್ ಆಫ್ ಸಿಲೆಬಸ್ ಪ್ರಶ್ನೆಗಳನ್ನೇ ಕೇಳುವುದರಿಂದ.

ಎಂ.ಬಿ. ರಂಗಪ್ಪಶೆಟ್ಟಿ, ಮೋಕ

◆ ಸಭೆ ಸಮಾರಂಭಗಳಲ್ಲಿ ಅಳುವ ಮಂತ್ರಿಯಿಂದ ರಾಜ್ಯದ ಅಭಿವೃದ್ಧಿ ಸಾಧ್ಯವೆ?

ಹುಷ್! ಇದೇ ವಾಸಿ. ಅವರು ನಗುತ್ತಿದ್ದಾರೆಂದರೆ ರಾಜ್ಯಕ್ಕೆ ಏನೋ ಗ್ರಹಚಾರ ಕಾದಿದೆ ಎಂದೇ ಅರ್ಥ.

ಸಿಹಿಮೊಗೆ ರಮೇಶ್, ಮೈಸೂರು

◆ ಜಿಲ್ಲಾ ವಿದ್ಯಾರ್ಥಿಗಳು ರ್‍ಯಾಂಕ್ ಬರಲು ಕಾರಣ ಅವರ ಶ್ರಮವಲ್ಲ, ತನ್ನ ಹೆಂಡತಿ ಎಂದ ದಡ್ಡಮಂತ್ರಿಯ ಆಲೋಚನಾ ಶಕ್ತಿಯೇ ಸತ್ತುಹೋಗಿದೆಯೆ?

ಊಹೂಂ. ಇಲ್ಲದಿರುವುದು ಸಾಯುವುದಾದರೂ ಹೇಗೆ!

ಎನ್.ಎಸ್. ಚಂದ್ರಶೇಖರ್, ಬೆಂಗಳೂರು

◆ ಜೀವನದುದ್ದಕ್ಕೂ ನರಕ ಅನುಭವಿಸಿದವನು ಸತ್ತಮೇಲೆ ಸ್ವರ್ಗ ಸೇರುತ್ತಾನೆಯೆ?



ಅವನು ಸೇರಿದ ಜಾಗವೇ ಸ್ವರ್ಗ. ಇಲ್ಲಿನ ನರಕ ಅನುಭವಿಸಿದ ಮೇಲೆ ಒರಿಜಿನಲ್ ನರಕವೂ ಸ್ವರ್ಗವೇ.

ಹರಿತಸ, ಬೆಂಗಳೂರು

◆ ಬೇಸಿಗೆಯಲ್ಲೂ ಹುಡುಗಿಯರು ಸ್ವೆಟರ್ ಹಾಕಿಕೊಂಡು ಪಾರ್ಕ್‌ನಲ್ಲಿ ವಾಕ್ ಮಾಡುತ್ತಾರೆ. ಯಾಕೆ ರಾಮ್‌ಜೀ?

ಬೆವರಿಳಿಸುವ ಕಾಮದ ನೋಟಕ್ಕಿಂತ ಬೆವರು ಹೀರುವ ಸ್ವೆಟರ್ರೇ ವಾಸಿ ಎಂದು.

■ ರಾಮ್